## ನದಿಯ ಅಳಲು

ಮೌಲ್ಯ: "ಮಾಲಿನ್ಯ ರಹಿತ ನದಿ ಮನುಕುಲದ ಭದ್ರ ಬುನಾದಿ"

. ### ಪದಗಳ ಅರ್ಥ

1.ಅನಾಹುತ - ತೊಂದರೆ
2.ಕೊಳಕು - ಮಲಿನ
3.ಗುಳ್ಳೆ - ಬೊಬ್ಬೆ
4.ಚಿಕಿತ್ಸೆ - ಆರೈಕೆ
5.ಜಲಚರ - ನೀರಿನಲ್ಲಿ ವಾಸಿಸುವ ಜೀವಿಗಳು

---

## ಅಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧.ಯಾರಿಗೆ ಮಾಲಿನ್ಯದ ಸೋಂಕು ತಗುಲಿತು?
ಉ: ಮಕ್ಕಳಿಗೆ ಮಾಲಿನ್ಯದ ಸೋಂಕು ತಗುಲಿತು.

---

೨.ಗೆಳೆಯ ಗೆಳತಿಯರು ಎಲ್ಲಿ ಸ್ನಾನ ಮಾಡಿದರು?
ಉ: ಗೆಳೆಯ ಗೆಳತಿಯರು ಮಾಲಿನ್ಯದಿಂದ ತುಂಬಿದ ನದಿಯಲ್ಲಿ ಸ್ನಾನ ಮಾಡಿದರು.

---

೩.ಸ್ನಾನ ಮಾಡಿದವರನ್ನು ಆಸ್ಪತ್ರೆಗೆ ಸೇರಿಸಿದವರು ಯಾರು ?
ಉ: ಸ್ನಾನ ಮಾಡಿದವರನ್ನು ಆಸ್ಪತ್ರೆಗೆ ಸೇರಿಸಿದವರು ದಾರಿಹೋಕರು.

---

೪.ನದಿ ಮಧ್ಯದಿಂದ ಯಾರು ಧುತ್ತನೆ ಪ್ರತ್ಯಕ್ಷಳಾದಳು?
ಉ: ಕೊಳೆ ಕೆಸರಿನಿಂದ ಕೂಡಿದ ಜಲದೇವತೆ ನದಿ ಮಧ್ಯದಿಂದ ಧುತ್ತನೆ ಪ್ರತ್ಯಕ್ಷಳಾದಳು.

---

೫.ಮಕ್ಕಳು ಯಾರ ಸಹಕಾರದೊಂದಿಗೆ ನದಿ ಸ್ವಚ್ಛತೆಯ ಜವಾಬ್ದಾರಿಯನ್ನು ವಹಿಸಿಕೊಂಡರು?
ಉ: ಮಕ್ಕಳು ತಮ್ಮ ಹೆತ್ತವರ ಹಾಗೂ ಊರವರ ಸಹಕಾರದೊಂದಿಗೆ ನದಿ ಸ್ವಚ್ಛತೆಯ ಜವಾಬ್ದಾರಿಯನ್ನು ವಹಿಸಿಕೊಂಡರು.

---

ಆ.ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧.ಮಕ್ಕಳು ಏಕೆ ನದಿಯಲ್ಲಿ ಸ್ನಾನ ಮಾಡಿದರು?
ಉ: ಮಕ್ಕಳು ಮಧ್ಯಾಹ್ನದವರೆಗೂ ಆಟವಾಡಿ ಅನಂತರ ಸೆಕೆಯನ್ನು ತಾಳಲಾರದೆ ನದಿಯಲ್ಲಿ ಸ್ನಾನ ಮಾಡಿದರು.

---

೨. ಸ್ನಾನದ ಬಳಿಕ ಮಕ್ಕಳ ಸ್ಥಿತಿ ಏನಾಗಿತ್ತು?
ಉ: ಸ್ನಾನದ ಬಳಿಕ ಮಕ್ಕಳ ಮೈಮೇಲೆಲ್ಲಾ ದಪ್ಪ ದಪ್ಪ ಗುಳ್ಳೆಗಳು ಎದ್ದು ವಿಪರೀತ ತುರಿಕೆ ಪ್ರಾರಂಭವಾಯಿತು. ನೋವು ತಾಳಲಾರದೆ ದಂಡೆಯಲ್ಲಿ ಬಿದ್ದು ಹೊರಳಾಡಿದರು. ಯಾರೋ ದಾರಿಹೋಕರು ಮಕ್ಕಳನ್ನು ಎತ್ತಿಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿದರು.

---

೩.ರೆಹಮಾನ್ ಜಲದೇವತೆಗೆ ಏನೆಂದು ಹೇಳಿದ?
ಉ: ರೆಹಮಾನ್ ಜಲದೇವತೆಗೆ ಈಗ ನೀನು ಕಲುಷಿತಗೊಂಡಿರುವೆ. ನಿನ್ನ ನೀರನ್ನು ಕುಡಿಯಬಾರದಂತೆ, ನಿನ್ನಲ್ಲಿ ಸ್ನಾನ ಮಾಡಬಾರದಂತೆ.

ವೈದ್ಯರೆ ಈ ವಿಚಾರ ನಮಗೆ ತಿಳಿಸಿದ್ದಾರೆ. ಅಲ್ಲದೆ ನಮ್ಮ ಗೆಳೆಯ
ಗೆಳತಿಯರು ನಿನ್ನಲ್ಲಿ ಸ್ನಾನ ಮಾಡಿ ಅಸ್ವಸ್ಥರಾಗಿ ಆಸ್ಪತ್ರೆಗೆ
ಸೇರಿದ್ದಾರೆ ಎಂದು ಹೇಳಿದ.

---

೪.ನದಿ ಶುದ್ಧವಾಗಿ ಹರಿಯುವಂತಾಗಲು ಏನು ಮಾಡಬಹುದು?
ಉ: ನದಿಗೆ ಯಾವುದೆ ಬಗೆಯ ಮಲಿನ ವಸ್ತು ಸೇರದಂತೆ ನೋಡಿಕೊಳ್ಳಬೇಕು,
ಕಾರ್ಖಾನೆಗಳ ರಾಸಾಯನಿಕ ಪದಾರ್ಥವಾಗಲಿ, ಊರಿನ ಸಮಗ್ರ ಕೊಳಚೆಯಾಗಲಿ
ನದಿಗೆ ಸೇರದಿದ್ದರೆ ನದಿಯು ಶುದ್ಧವಾಗಿ ಹರಿಯುತ್ತದೆ.

---

ಇ.ಕೊಟ್ಟಿರುವ ಪದಗಳಲ್ಲಿ ಸರಿಯಾದ ಉತ್ತರ ಆಯ್ಕೆ ಮಾಡಿ ಬರೆಯಿರಿ.
೧.ಮಕ್ಕಳ ಮೈಮೇಲೆಲ್ಲಾ ದಪ್ಪದಪ್ಪ ಗುಳ್ಳೆಗಳು ಎದ್ದು ತುರಿಕೆ
ಪ್ರಾರಂಭವಾಯಿತು.
೨.ಮಕ್ಕಳು ಬೆಳಗ್ಗೆ ಆಟವಾಡಲು ಹೋಗಿದ್ದರು.
೩.ಮಲಿನ ನದಿಯು ಮನುಷ್ಯರ ಜೀವಕ್ಕೆ ಅಪಾಯಕಾರಿ.
4. ನನ್ನ ಮೇಲಾಗುತ್ತಿರುವ ಮನುಷ್ಯರ ದೌರ್ಜನ್ಯ ಸಂಪೂರ್ಣವಾಗಿ
ನಿಲ್ಲಬೇಕು.

---

ಉಕ್ತಲೇಖನ
1.ಅನಾಹುತ
2.ಆಸ್ಪತ್ರೆ
3.ನದಿ
4.ಚಿಂತೆ
5.ಕಾರಣ
6.ಅಪಾಯಕಾರಿ
7.ಅಸಹ್ಯ
8.ಪದಾರ್ಥ
9.ದೌರ್ಜನ್ಯ
10.ಸಹಕಾರ

---